**<u>ದಿನಾಂಕಃ 19.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಪಿ.ಎಲ್.ಎನ್. ವಕೀಲರಿಂದಃ</u>**

1) ಪ್ರತಿವಾದಿ ಬೋರೇಗೌಡರ ಪರಿಚಯ ಇದೆ. ಆತ ಮೂಲತಃ ಕಳ್ಳಿಹೊಸೂರು ಗ್ರಾಮದವರು. ವಾದ ಪತ್ರದಲ್ಲಿ ಪ್ರತಿವಾದಿಯು ಕಳ್ಳಿಹೊಸೂರು ಗ್ರಾಮದಲ್ಲಿ ವಾಸವಿರುವುದಾಗಿ ಬರೆಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಸರ್ವೆ ನಂ.383/18 ರಲ್ಲಿ ಸ್ವಾಧೀನ ಇರುತ್ತೀರಾ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂ.383/18 ರ ಸ್ವತ್ತಿನ ಪೂರ್ವಕ್ಕೆ ಕಣ್ವ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪಶ್ಚಿಮಕ್ಕೆ ನಮಗೆ ಸೇರಿದ ಖಾಲಿ ಜಾಗ ಇದೆ ಎಂದರೆ ಸರಿ. ತದನಂತರ ಪಶ್ಚಿಮಕ್ಕೆ ನಮ್ಮ ಮನೆ ಇರುತ್ತದೆ ಎಂದರೆ ಸರಿ. ನನ್ನ ಗಂಡ ಆ ರೀತಿ ನಮ್ಮಮನೆಯ ಪಶ್ಚಿಮಕ್ಕೆ ಇರುವ ಸ್ವತ್ತನ್ನು ಮಂಗಳಮ್ಮ, ಕೆಂಚಮ್ಮ, ಶಾಂತಮ್ಮ ಮತ್ತು ಸಾಕಮ್ಮ ಎಂಬ ನಾಲ್ಕು ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2) ಈ ದಾವೆ ಹೂಡುವ ಪೂರ್ವದಲ್ಲಿ ನಾವು ವಕೀಲರ ಮೂಖಾಂತರ ಮಂಗಳಮ್ಮ, ಕೆಂಚಮ್ಮ, ಶಾಂತಮ್ಮ ಮತ್ತು ಸಾಕಮ್ಮ ರವರ ಮಗ ಉಮೇಶ್ ರವರಿಗೆ ನೋಟೀಸನ್ನು ನೀಡಿರುತ್ತೇವೆ ಎಂದರೆ ಸರಿ. ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಜನರಿಗೆ ನೀಡಿದ ಸ್ವತ್ತಿನ ಉತ್ತರಕ್ಕೆ 9 ಅಡಿ ರಸ್ತೆ ಇದೆ ಎಂದರೆ ಸರಿ. ಆ 9 ಅಡಿ ರಸ್ತೆಯ ನಂತರ ಪಶ್ಚಿಮಕ್ಕೆ ಪ್ರತಿವಾದಿಯ ಸ್ವತ್ತು ಇದೆ ಎಂದರೆ ಸರಿ. ದಾವಾ ಸ್ವತ್ತು ಪ್ರತಿವಾದಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ರಸ್ತೆಯ ಪಕ್ಕದಲ್ಲಿ ಇರುವ ಸರ್ವೆ ನಂ.383/18 ರ ಸ್ವತ್ತು ನಿಮಗೆ ಸೇರಿದ ಸ್ವತ್ತು ಎಂದರೆ ಸಾಕ್ಷಿಯು ಜಯಲಕ್ಷಮ್ಮಮ್ಮ ಮತ್ತು ಮರಿಸ್ವಾಮಿ ಎಂಬ ಇಬ್ಬರಿಗೆ ಭಾಗ ಮಾಡಿಕೊಟ್ಟಿರುವುದಾಗಿ ನುಡಿಯುತ್ತಾರೆ. ಆ ರೀತಿ ಭಾಗವನ್ನು ಪ್ರತಿವಾದಿಯ ತಂದೆ ನಾರಾಯಣಗೌಡರವರು ಮಾಡಿರುತ್ತಾರೆ. ಆ ಸಂಬಂಧ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂ.383/17 ನೇ ಸ್ವತ್ತು ಪ್ರತಿವಾದಿಗೆ ಸೇರಿದ್ದು, ಅದರ ನಂತರ ಪಶ್ಚಿಮಕೆ ಇರುವ 1 ಎಕರ೯ 4 ಗುಂಟೆ ಜಮೀನು ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ ತಮಗೂ ಸಹ 7 1/2 ಗುಂಟೆ ಜಮೀನು ಬರಬೇಕು ಎಂದು ನುಡಿಯುತ್ತಾರೆ.

3) ಪ್ರತಿವಾದಿಯ ತಂದೆಯಿಂದ ನನ್ನ ಗಂಡ ಪೂರ್ವ ಪಶ್ಚಿಮ 180 ಅಡಿ ಹಾಗೂ ಉತ್ತರ ದಕ್ಷಿಣ 80 ಅಡಿ ವಿಸ್ತೀರ್ಣದ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಆ ಸ್ವತ್ತನ್ನು ನನ್ನ ಮದುವೆಯ ಪೂರ್ವದಲ್ಲಿ ಖರೀದಿ ಮಾಡಿರುವ ಕಾರಣ ಆ ಸ್ವತ್ತನ್ನು ಅಡಿಗಳ ಲೆಕ್ಕದಲ್ಲಿ ತೆಗೆದುಕೊಂಡಿದ್ದಾರೆಯೇ ಅಥವಾ ಗುಂಟೆ ಲೆಕ್ಕದಲ್ಲಿ ತೆಗೆದುಕೊಂಡಿರುತ್ತಾರೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡ ಪೂರ್ವ ಪಶ್ಚಿಮ 180 ಅಡಿ ಹಾಗೂ ಉತ್ತರ ದಕ್ಷಿಣ 80 ಅಡಿ ವಿಸ್ತೀರ್ಣದ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂ.383/18 ರಲ್ಲಿ ನನ್ನ ಗಂಡ ಖರೀದಿ ಮಾಡಿರುವ ಸ್ವತ್ತನ್ನು ಹೊರತುಪಡಿಸಿ ಪ್ರತಿವಾದಿಯಿಂದ ನಮಗೆ ಬೇರೆ ಯಾವುದೇ ಸ್ವತ್ತು ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಖರೀದಿ ಮಾಡಿದ ಸ್ವತ್ತಿನ ಪೂರ್ವ ದಿಕ್ಕಿಗೆ ಇದ್ದ ಸ್ವತ್ತನ್ನು ಆತನ ತಂದೆ ಈ ಹಿಂದೆ ಮಾರಾಟ ಮಾಡಿರುತ್ತಾರೆ ಮತ್ತು ಅಲ್ಲಿ ನಮಗೆ ಯಾವುದೇ ರೀತಿ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ.

4) ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನನ್ನ ಮತ್ತು ಪ್ರತಿವಾದಿಯ ಜಮೀನು ಉತ್ತರಕ್ಕೆ ಜಯಲಕ್ಷ್ಮಿ ರವರ ಮನೆ ದಕ್ಷಿಣಕ್ಕೆ ನಾರಾಯಣಪ್ಪ ನವರ ಗದ್ದೆ ಇದ್ದು ಅದು ಬೇರೆಯವರಿಗೆ ಮಾರಾಟ ಆಗಿರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಪ್ರತಿವಾದಿಗೆ ಸೇರಿದ ಸರ್ವೆ ನಂ.383/4 ರ ಜಮೀನವ ಇದೆ ಎಂದರೆ ಸರಿಯಲ್ಲ. ಅದೇ ರೀತಿ ಉತ್ತರಕ್ಕೆ ಶಿವಮೂರ್ತಿ ರವರ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆತ ಆ ಜಮೀನನ್ನು ಮಾರಾಟ ಮಾಡಿರುವುದಾಗಿ ನುಡಿಯುತ್ತಾರೆ. ಅದೇ ರೀತಿ ದಾವಾ ಸ್ವತ್ತಿನ ದಕ್ಷಿಣಕ್ಕೆ ಉಮಾಶಂಕರ್ ರವರು ಜಮೀನು ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಮಗೆ ಸೇರಿದ ಸ್ವತ್ತು ಸರ್ವೆ ನಂ. 383/18 ರಲ್ಲಿ ಸೇರ್ಪಡೆ ಆಗಿದ್ದು ನಾನು ಹೇಳಿದಂತೆ ಸರ್ವೆ ನಂ.383/17 ರಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ.

5) ನನ್ನ ಗಂಡ ಮೃತ ಪಟ್ಟ ನಂತರ ನಾವು ಈ ಹಿಂದೆ ಪ್ರತಿವಾದಿಯ ಹೆಸರಿಗೆ ಒಟ್ಟಾಗಿ ಬರುತ್ತಿದ್ದ ಪಹಣಿ ಪತ್ರಿಕೆಗಳನ್ನು ತೆಗೆಸಿ ಪ್ರತ್ಯೇಕವಾಗಿ ನಮ್ಮ ಹೆಸರಿಗೆ ಪಹಣಿ ಪತ್ರಿಕೆಗಳನ್ನು ಮಾಡಿಸಿಕೊಂಡಿರುತ್ತೇವೆ. ಆ ರೀತಿ ಪ್ರತ್ಯೇಕವಾಗಿ ಪಹಣಿ ಪತ್ರಿಕೆಗಳನ್ನು ಮಾಡಿಸಿಕೊಂಡ ನಂತರ ನನ್ನ ಹೆಸರಿಗೆ ನಿಪಿ.10 ರಂತೆ ಸರ್ವೆ ನಂ.383/18 ರಲ್ಲಿ 7.04 ಗುಂಟೆ ಜಮೀನಿಗೆ ಪಹಣಿ ಪತ್ರಿಕೆ ದಾಖಲಾಗಿದೆ ನನ್ನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದು ತಪ್ಪಿನಿಂದ ಕೂಡಿದೆ ಎಂದು ನುಡಿಯುತ್ತಾರೆ. ಆ ರೀತಿ ಪಹಣಿ ಪತ್ರಿಕೆ ದಾಖಲು ಮಾಡುವ ಕಾಲಕ್ಕೆ 7 1/2 ಗುಂಟೆ ಜಮೀನು ಕೈಬಿಟ್ಟು ಹೋಗಿರುತ್ತದೆ. ಆ ರೀತಿ ಜಮೀನು ಕೈಬಿಟ್ಟು ಹೋಗಿರುತ್ತದೆ ಎಂದು ಹೇಳಿ ಕಂದಾಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆ ರೀತಿ ನಾನು ಹೇಳುತ್ತಿರುವ 7 1/2 ಗುಂಟೆ ಜಮೀನನ್ನು ನನ್ನ ಗಂಡ ಆತನ

ಜೀವಿತಾವದಿಯಲ್ಲಿ ಮಂಗಳಮ್ಮ, ಕೆಂಚಮ್ಮ, ಶಾಂತಮ್ಮ ಮತ್ತು ಸಾಕಮ್ಮ ಎಂಬ ನಾಲ್ಕು ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸದೆ ಕೇವಲ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಈ ಪ್ರಕರಣವನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಈ ಹಿಂದೆ ತನ್ನ ತಂದೆಯ ಹಸೆರಿಗೆ ಇದ್ದ ಜಮೀನಿನ ಖಾತೆಯನ್ನು ಮಾತ್ರ ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಈ ಹಿಂದೆ ದಾವಾ ಸ್ವತ್ತನ್ನು ಮಾರಾಟ ಮಾಡಿರುವ ಕಾರಣ ನಮಗೆ ದಾವೆಯಲ್ಲಿ ಕೋರಿದಂತ ಪರಿಹಾರವನ್ನು ಪಡೆಯಲು ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳುದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪ್ರತಿವಾದಿಯ ಯಾವುದೇ ರೀತಿ ಸ್ವತ್ತನ್ನು ಒತ್ತುವರಿ ಮಾಡಿಲ್ಲ ಆದರೂ ಸಹ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**